ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ7[2]ಪ್ರಾಶಿಅ.ಹೊ.ಶಾ.73/14-15 ದಿನಾಂಕ: 01/12/2014

## ಜ್ಞಾಪನಾ

ವಿಷಯ: 2015-16ನೇ ಶೈಕ್ಷಣಿಕ ಸಾಲಿಗೆ ಹೊಸ ಶಿಕ್ಷಣ ಸಂಸ್ಥೆಗಳ ನೊಂದಣಿಗೆ ದಿನಾಂಕ: 11/11/2014ರ ಸರ್ಕಾರದ ಅಧಿಸೂಚನೆಯಂತೆ ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು ಕೆಲವು ಸಂಸ್ಥೆಗಳು ರಾಜ್ಯ ಉಚ್ಚನ್ಯಾಯಾಲಯದಿಂದ ಮಧ್ಯಂತರ ಆದೇಶ ಪಡೆದು ನೊಂದಣಿಗಾಗಿ ತಮ್ಮ ಅರ್ಜಿಗಳನ್ನು ಸ್ವೀಕರಿಸಲು ಕೋರಿದ ಪ್ರಕರಣಗಳಲಿ ಕೈಗೊಳ್ಳಬೇಕಾದ ಕ್ರಮಕುರಿತು .

ಉಲ್ಲೇಖ: 1)ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿ.ಜಿ.ಸಿ 2014 ದಿನಾಂಕ:11.11.2014.

2)ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ7[2]ಪ್ರಾಶಿಅ.ಹೊ.ಶಾ.73/14-15 ದಿನಾಂಕ: 14/11/2014

3)ರಿಟ್ ಅರ್ಜಿ ಸಂಖ್ಯೆ: 55106/2014ರಲ್ಲಿ ದಿನಾಂಕ: 28/11/2014ರ ಮಧ್ಯಂತರ ಆದೇಶ.

**********************

ಉಲ್ಲೇಖಿತ ನ್ಯಾಯಾಲಯದ ಆದೇಶದ ಪ್ರತಿಯನ್ನು ಲಗತ್ತಿಸಿದೆ. ಆದೇಶದ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸತಕ್ಕದ್ದು. ರಿಟ್ ಅರ್ಜಿಯಲ್ಲಿ ಅಧಿಸೂಚನೆಯ ಇತರೆ ಅಂಶಗಳ ಬಗ್ಗೆ, ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು, ಸ್ವೀಕರಿಸಬೇಕಾಗಿದೆ. ಸಂಬಂಧಿತ ಸೂಕ್ತ ದಾಖಲೆಗಳನ್ನು ಪರಿಶೀಲಿಸಿಕೊಂಡು ಸದರಿ ಅರ್ಜಿದಾರರಿಂದ "**ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು**" ಎಂಬುದಾಗಿ ಮುಚ್ಚಳಿಕೆಯನ್ನು ಪಡೆಯತಕ್ಕದ್ದು. ನ್ಯಾಯಾಲಯದ ಆದೇಶವನ್ನು ಪಾಲಿಸದೇ ನಿಂದನಾ ದಾವೆ ದಾಖಲಾದರೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರೇ ಹೊಣೆಗಾರರಾಗುತ್ತಾರೆ.

ಯಾವುದೇ ಗೊಂದಲಗಳಿಗೆ ಅನುವಾಗದೇ ಇರಲಿ ಎಂಬ ಹಿನ್ನೆಲೆಯಲ್ಲಿ ದಿನಾಂಕ: 11/11/2014ರ ಸರ್ಕಾರದ ಅಧಿಸೂಚನೆ ಮತ್ತು ಸಂಬಂಧಪಟ್ಟಂತೆ ದಿನಾಂಕ: 14/11/2014ರ ಇಲಾಖಾ ಸುತ್ತೋಲೆಯ ನಿಯಮಗಳಂತೆ ಸಲ್ಲಿಸಲಾಗುವ ಅರ್ಜಿಗಳ ಕುರಿತಂತೆಯು ದಿನಾಂಕ: 05/12/2014ರ ವರೆಗೆ ಅವಧಿಯನ್ನು ವಿಸ್ತರಿಸಿದೆ. ಉಳಿದಂತೆ ಎಲ್ಲಾ ನಿಯಮಗಳು ಅನ್ವಯವಾಗುತ್ತದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ರಾಜ್ಯ ಎಲ್ಲಾ ಉಪನಿರ್ದೇಶಕರು [ಆಡಳಿತ] ರವರಿಗೆ,
2. ಅಪರ ಆಯುಕ್ತರು ದಾರವಾಡ ಮತ್ತು ಗುಲ್ಬರ್ಗ ವಿಭಾಗ ರವರಿಗೆ,
3. ಕಛೇರಿ ಪ್ರತಿ.